ISSN 2250-1711

॥ सत्यं ज्ञानमनन्तम् ॥

# JOURNAL OF VEDA SAMSKRITA ACADEMY

# जर्नल् आफ् वेद संस्कृत अकाडेमि

**Recognised in the UGC-CARE List**

**A NATIONAL PEER-REVIEWED RESEARCH JOURNAL**

विश्वविद्यालय-अनुदान-आयोगेन केर सूच्यां मानिता

मूल्याङ्किता राष्ट्रियसंशोधनपत्रिका

**VOLUME: XXI**

**January to June – 2023**

Editor in Chief :
**DR. GOPALKRISHNA HEGDE**
[Jyotishashastra-Dharmashastra Vidwan]

## VEDA SAMSKRITA ACADEMY (Regd.)

Formerly : Veda Samskrita Prasarinee Sabha (R.)
Regd. No. : DR : SOR : 108 : 2003-04, Dated : 30-10-2003
Registered under Societies Registration Act, of Karnataka-1960

**Registered office address :**

# 1347, Kalkod Road, HEGDE-581330, Kumta, Uttarakannada, Karnataka, India
E-mail ID : **vedasmkac@gmail.com**
Website : **www.vedasamskritaacademy.org**

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E.Society's
Arts & Commerce College
GADAG-BETGERI-582101

Title of the Journal : **Journal of Veda Samskrita Academy**

Recognised in the UGC-CARE List

A National Peer-Reviewed Research Journal

जर्नल् आफ् वेद संस्कृत अकाडेमि

विश्वविद्यालय-अनुदान-आयोगेन केर सूच्यां मानिता

मूल्याङ्किता राष्ट्रियसंशोधनपत्रिका

**ISSN : 2250-1711**

Editor & Publisher : **Dr. Gopalkrishna Hegde**
gopalkrishnh9@gmail.com
9741847399
Director,
Veda Samskrita Academy (Regd.)
Kalkod Road, HEGDE- 581330
Kumta, Uttara Kannada, Karnataka
web site : www.vedasamskritaacademy.org
E-mail : vedasmkac@gmail.com

**All rights are Reserved with the Publisher**

**" All opinion / views expressed in the research papers are of the authors only, no way they are ascribed to the Academy"**

| | | |
|---|---|---|
| Languages | : | Samskrita, Kannada, English, Hindi |
| Imprint | : | Volume XXI, January to June – 2023 |
| Paper | : | 70gsm (B2B) and Art paper – 300gsm |
| Size of the Journal | : | A4 |
| Number of Pages | : | 518 + 14 + 3 (colour page) |
| Number of Copies | : | 200 |
| D. T. P. | : | Chanda Graphics, Kumta |
| Art works | : | Girish R. Bhat, Digital World, Kumta |
| Printing & | : | Shiva Offset Printers, Kumta |
| Binding | : | Shri Krishna Mudranalaya, Hegde |
| **Price** | : | **1000/- Rs.** |

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E.Society's
...s & Commerce College
...G-BETGERI-582101

| | | |
|---|---|---|
| 28. | Study of Agricultural Science in Sanskrit Literature<br>Dr. Sankar Chatterjee, Associate Professor , Cooch Behar ,W.B. | 343-346 |
| 29. | No-Soul theory of Buddha<br>Dr. Charu Das, Associate Professor, Guwahati, Assam | 347-351 |
| 30. | NEP-2020 In the light of Ancient Education System<br>Pinki Paul, Assistant Professor, Alipurduar, West Bengal | 352-355 |
| 31. | General principles of the *Mīmāṃsā* law: a psychological study<br>Mr. Supriya Roy, Assistant Professor, Murshidabad, West Bengal - 9093765087 | 356-359 |
| 32. | Divine Birth of Lord Buddha : In the light of Buddhacarita<br>Dr. Arnab Patra, Assistant Professor, Asutosh College, Kolkata, West Bengal | 360-362 |
| 33. | Concept of virtue in ancient sanskrit texts & plato's early dialogues<br>Kshitij Mohunta, PhD Scholar, SVYASA, Bengaluru | 363-367 |
| 34. | Gender mainstreaming and soap opera : Conception or Misconception<br>Deboleena Dutta, State Aided College Teacher, West Bengal, 9126703976 | 368-371 |
| 35. | Upanishad literature in the unveiling of human emotion<br>Jubin Yasmin, Assistant professor, Kolkata, West Bengal- 9832694844 | 372-375 |
| 36. | Women in post colonial twentieth century Indian english fiction : A selective and graphical study of three decades<br>Prof. Sangeeta Singh, Dept. of English, Kota, Rajasthana- 9414331103 | 376-379 |
| 37. | Brave New Women in Brave New World with Reference to Divakaruni's *The Mistress of Spices*<br>Dr. J. Nasreen Banu, Assistant Professor of English, Tiruchengode, 9894553454 | 380-382 |

| | हिन्दीविभाग | |
|---|---|---|
| 1. | मैत्रेयी पुष्पा के कहानियों में स्त्री – मुक्ति संदेश<br>डा. कृष्णा डी लमाणि, सहायक प्राध्यापक, हिंदी अध्ययन विभाग, बेंगलूरु, कर्नाटक, 8618152900 | 383-387 |
| 2. | सर्वेश्वरदयाल सक्सेना की कविता एवं आलोचनात्मक संदर्भ<br>डा. एम्. अब्दुल रजाक, सहायक प्राध्यापक, बेंगलूरु, कर्नाटक, 9493405942, 8919113820 | 388-392 |
| 3. | मन्नेरवारलू जनजातिऔर समकालीन जीवन<br>डॉ. गणशेटवार साईनाथ नागनाथ, सहायक प्राध्यापक - हिन्दी विभाग, बेंगलूरू, कर्नाटक - 7598438956 | 393-397 |
| 4. | उग्र जी की कतिपय कहानियों में राष्ट्रीय चेतना के स्वर<br>डॉ. मनोज कुमार दुबे, हिंदी सहायकाचार्य, मुंबई , महाराष्ट्र, 9920287301 | 398-402 |
| 5. | अथर्ववेदीय ब्रह्मबिन्दूपनिषद् का दार्शनिक तत्त्वज्ञान<br>डॉ. प्रियंककुमार एन. रावल, सहायक अध्यापक, वल्लभ विद्यानगर, गुजरत- 7984896914 | 403-407 |
| 6. | कन्नड साहित्य में दास साहित्य और संगीत<br>डा. महमद नयास पाशा, हिन्दी विभाग, बेंगलूरु, कर्नाटक - 9632783783 | 408-411 |
| 8. | 'कोमल गांधार' नाटक में चित्रित 'नारी'<br>विनोद बाबुराव मेघशाम, बेङ्गलूरु, कर्नाटक- 9008467187 | 412-416 |

| | ಕನ್ನಡ ವಿಭಾಗ | |
|---|---|---|
| 1. | ಬೆಳ್ವೊಲನಾಡಿನ ಶಾಸನಗಳಲ್ಲಿ ಧರ್ಮ ಸಮನ್ವತೆ<br>ಡಾ. ಶರಣಪ್ಪ ಬಸಪ್ಪ ಜಗ್ಗಲ್, ಹಾವೇರಿ, ಕರ್ನಾಟಕ– 8884608967 | 417-421 |
| 2. | ವಚನ ವಿಮರ್ಶೆಗಳು : ಅಲಂಕಾರಶಾಸ್ತ್ರದ ನೆಲೆ<br>ಡಾ. ಅಂದಯ್ಯ ಅರವಟಗಿಮಠ, ಗದಗ, ಕರ್ನಾಟಕ– 7406745526 | 422-424 |
| 3. | ವಿವೇಕಾನಂದರ ಚಿಂತನೆಯಲ್ಲಿ ವರ್ಣ ಮತ್ತು 'ಜಾತಿ ವ್ಯವಸ್ಥೆ'<br>ಡಾ. ವೀಣಾ ಈ., ಗದಗ, ಕರ್ನಾಟಕ– 9113058404 | 425-429 |
| 4. | ಕನ್ನಡದಲ್ಲಿ ಪುರಾಣ ಕಾವ್ಯಗಳ ಸ್ವರೂಪ<br>ಡಾ. ಎ. ವಿ. ದೇವಾಂಗಮಠ, ಗದಗ, ಕರ್ನಾಟಕ– 9880042365 | 430-432 |


CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E.Society's
Arts & Commerce College
GADAG-BETGERI-582101

Volume XXI : January to June – 2023, ISSN 2250-1711
Journal of Veda Samskrita Academy [Recognised in the UGC-CARE List]

# ವಿವೇಕಾನಂದರ ಚಿಂತನೆಯಲ್ಲಿ ವರ್ಣ ಮತ್ತು 'ಜಾತಿವ್ಯವಸ್ಥೆ'

**Dr. Veena. E**
Assistant Professor, Dept. of Political Science
KLE Society's Arts & Commerce College, Gadag
Hatalageri Naaka, KLE Campus, Gadag-582101, Karnataka
Contact No. : 9113508404
E-mail : veenakle20@gmail.com

## ಲೇಖನ ಸಾರಾಂಶ

*ಭಾರತೀಯ ಸಮಾಜದ ಕುರಿತ ಈವರೆಗಿನ ವಿವರಣೆಗಳಲ್ಲಿ ಹೆಚ್ಚು ಚಲಾವಣೆಯಲ್ಲಿರುವುದು ಜಾತಿವ್ಯವಸ್ಥೆಯ ಸಿದ್ಧಾಂತ. ಜಾತಿವ್ಯವಸ್ಥೆಯನ್ನು ಭಾರತೀಯ ಸಮಾಜದ ಕೆಡುಕನ್ನಾಗಿ ನೋಡುವ ಚಿಂತಕರು ಕೆಲವೊಮ್ಮೆ ತಮ್ಮ ಜಾತಿವಿನಾಶದ ಪ್ರತಿಪಾದನೆಗಳಿಗೆ ಜಾತಿ ಮತ್ತು ವರ್ಣದ ಕುರಿತ ವಿವೇಕಾನಂದರ ಹೇಳಿಕೆಗಳನ್ನು ಸಾಕ್ಷಿಗಳನ್ನಾಗಿ ಬಳಸಿಕೊಳ್ಳುತ್ತಾರೆ. ಅಲ್ಲದೆ, 'ವಿವೇಕಾನಂದರು ಜಾತಿವ್ಯವಸ್ಥೆಯ ವಿರುದ್ಧದ ಮೊದಲ ಬಂಡಾಯದ ದನಿ', 'ಪರೋಹಿತಶಾಹಿ, ವರ್ಣವ್ಯವಸ್ಥೆಯಂತಹ ಅವ್ಯವಸ್ಥೆಗಳ ಮೇಲೋತ್ಪಾಟನೆಗೆ ಪ್ರಯತ್ನಿಸಿದ ಸಮಾಜ ಸುಧಾರಕ' ಎಂದೂ ಗುರುತಿಸಲಾಗುತ್ತಿದೆ. ಇನ್ನೊಂದೆಡೆ, ಇದಕ್ಕೆ ತದ್ವಿರುದ್ಧವಾಗಿ ವಿವೇಕಾನಂದರು ಜಾತಿವ್ಯವಸ್ಥೇಯನ್ನು ವಿರೋಧಿಸಿರಲಿಲ್ಲ ಬದಲಾಗಿ ಅದನ್ನು ಸಮರ್ಥಿಸುವ ಪ್ರಯತ್ನ ಮಾಡಿದರು ಎನ್ನುವ ವಿವರಣೆಗಳೂ ಚಾಲ್ತಿಯಲ್ಲಿವೆ. ಹೀಗೆ ಪರಸ್ಪರ ವಿರುದ್ಧವೆನಿಸುವ ಜಾತಿಪದ್ಧತಿಯ ಕುರಿತ ವ್ಯಾಖ್ಯಾನಗಳನ್ನು ವಿವೇಕಾನಂದರ ಚಿಂತನೆಗಳಲ್ಲಿಯೂ ಗುರುತಿಸಬಹುದು. ವಿವೇಕಾನಂದರು ಜಾತಿವ್ಯವಸ್ಥೆಯ ಕುರಿತು ಅಸ್ತಿತ್ವದಲ್ಲಿರುವ ವಿವರಗಳು ಹಾಗೂ ಸಿದ್ಧಾಂತಗಳು ಕೇವಲ ಪಾಶ್ಚಿಮಾತ್ಯ ಹಿನ್ನೆಲೆಯಿಂದ ರೂಪುಗೊಂಡಿವೆಯೇ ವಿನಃ ವಾಸ್ತವವಲ್ಲ ಎಂದು ಅವುಗಳನ್ನು ಟೀಕಿಸಿದ್ದಾರೆ. ಹಾಗೂ ಇಲ್ಲಿನ ಜಾತಿ ಮತ್ತು ವರ್ಣಗಳು ಉತ್ತಮ ಸಮಾಜಕ್ಕೆ ಅಗತ್ಯ, ಇಲ್ಲಿ ಜಾತಿತಾರತಮ್ಯವಿಲ್ಲ ಎನ್ನುತ್ತಾರೆ. ಅದೇ ಸಮಯಕ್ಕೆ ಜಾತಿವ್ಯವಸ್ಥೆಯ ಸಿದ್ಧಾಂತದ ಟೀಕೆಗಳನ್ನೇ ಹೋಲುವ 'ಜಾತಿತಾರತಮ್ಯ', ಬ್ರಾಹ್ಮಣ 'ಪುರೋಹಿತಶಾಹಿ', ಅಸ್ಪೃಶ್ಯತೆ ಮುಂತಾದವುಗಳನ್ನು ವಿರೋಧಿಸುವಂತಹ ಉಲ್ಲೇಖಗಳನ್ನೂ ಸಹ ವಿವೇಕಾನಂದರ ಚಿಂತನೆಯಲ್ಲಿ ಗಮನಿಸಬಹುದು. ಹೀಗೆ ವಿವೇಕಾನಂದರು ಒಂದೆಡೆ ಜಾತಿಯನ್ನು ತಿರಸ್ಕರಿಸುವಂತೆ ಮತ್ತೊಂದೆಡೆ ಅದರ ಪರವಾಗಿ ನಿಲ್ಲುವಂತೆಯೂ ತೋರುವುದು ಅವರ ವಿಚಾರಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಅಸಂಗತತೆಯನ್ನು ಉಂಟುಮಾಡುತ್ತದೆ. ಇದನ್ನೇ ಆಧಾರವಾಗಿಟ್ಟುಕೊಂಡು ವಿವೇಕಾನಂದರನ್ನು ಜಾತಿವಿರೋಧಿಯನ್ನಾಗಿಯೂ ಹಾಗೂ ಜಾತಿವಾದಿಯನ್ನಾಗಿಯೂ ಗುರುತಿಸುವುದು ಕಂಡುಬರುತ್ತದೆ. ವಿವೇಕಾನಂದರನ್ನು ಓರ್ವ ಸಮಾಜ ಸುಧಾರಕರನ್ನಾಗಿಯೂ ಹಾಗೂ ಹಿಂದೂ ರಾಷ್ಟ್ರೀಯವಾದಿಯನ್ನಾಗಿಯೂ ನೋಡುವ ಎರಡೂ ಬದಿಯವರು ಈ ಅಸಂಗತತೆಯನ್ನು ಪರಿಹರಿಸಿದಂತೆ ತೋರುವುದಿಲ್ಲ. ಬದಲಾಗಿ ವಿವೇಕಾನಂದರನ್ನು ಅನುಕೂಲಸಿಂಧುವನ್ನಾಗಿ ಬಳಸಿಕೊಳ್ಳುತ್ತಿರುವುದು ಎದ್ದುಕಾಣುತ್ತದೆ. ಹಾಗಾಗಿ, ಒಂದೊಮ್ಮೆ ಇಂತಹ ಅಸಂಗತತೆಯು ವಿವೇಕಾನಂದರ ಚಿಂತನೆಯಲ್ಲಿಯೇ ಇದ್ದರೆ ಅದು ಹೇಗೆ ರೂಪುಗೊಂಡಿದೆ? ಎಂಬುದನ್ನು ಪರೀಕ್ಷಿಸಬೇಕಾಗುತ್ತದೆ. ಇವುಗಳನ್ನು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗುತ್ತಿದೆ.*

## ಬಂಡಾಯದ ದನಿಯಾಗಿ ವಿವೇಕಾನಂದರು?

ಜಾತಿವ್ಯವಸ್ಥೆಯ ಸಿದ್ಧಾಂತಗಳ ಪ್ರಕಾರ ಭಾರತೀಯ ಸಮಾಜವು ಜಾತಿಗಳಾಧಾರಿತವಾಗಿ ವಿಭಜನೆಗೊಂಡಿದೆ. ಜಾತಿವ್ಯವಸ್ಥೆಯನ್ನು ನಿರ್ದಿಷ್ಟ ಜನಾಂಗ ಅಥವಾ ಗುಂಪು ಉಳಿದ ಜನಸಮುದಾಯದ ಮೇಲೆ ಹೇರಿದೆ. ಇದೊಂದು ಅಮಾನವೀಯ ವ್ಯವಸ್ಥೆಯಾಗಿದ್ದು, ಶತಮಾನಗಳಿಂದ ಹಲವು ಸಮುದಾಯಗಳು ಶೋಷಣೆಗೊಳಗಾಗಿವೆ. ಈ ಅನಾಗರಿಕ ವ್ಯವಸ್ಥೆಯ ವಿನಾಶಕ್ಕೆ ಅನೇಕ ಸುಧಾರಕರು ಪ್ರಯತ್ನಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಜಾತಿವ್ಯವಸ್ಥೆಯ ವಿರುದ್ಧ ಬಂಡಾಯವೆದ್ದ ಪ್ರಮುಖ ವ್ಯಕ್ತಿ ವಿವೇಕಾನಂದರಾಗಿದ್ದಾರೆ. ಆದರೆ 'ವಿವೇಕಾನಂದರನ್ನು ಹಾಗೆ ಗುರುತಿಸದೇ ಮತೀಯವಾದಿ ಅಥವಾ ಮೂಲಭೂತವಾದಿ ಎಂದು ಗುರುತಿಸಿರುವುದು ಸೋಜಿಗ' ಎನ್ನಲಾಗುತ್ತಿದೆ (ಜ. ಹೊ. ನಾರಯಣಸ್ವಾಮಿ, 1986, Xiii).[1] ಹಾಗೂ 'ವಿವೇಕಾನಂದರ ವಿಚಾರಗಳು ಹಾಗೂ ಹನ್ನೆರಡನೆಯ ಶತಮಾನದಲ್ಲಿ ಜಾತಿವ್ಯವಸ್ಥೆಯ ವಿನಾಶಕ್ಕೆ ಪ್ರಯತ್ನಿಸಿದ (ಇದರ ಕುರಿತು ಹಲವು ಸಮಸ್ಯೆಗಳಿವೆ) ಬಸವಣ್ಣನವರ ವಿಚಾರಗಳ ನಡುವೆ ಸಾಮ್ಯತೆ ಕಂಡುಬರುತ್ತದೆ. ಆದ್ದರಿಂದ ವಿವೇಕಾನಂದರೂ ಸಹ ಬಸವಣ್ಣನಂತೆ ಜಾತಿವ್ಯವಸ್ಥೆಯ ವಿರುದ್ಧ ಹೋರಾಡಿದ ಸಮಾಜ ಸುಧಾರಕನೆಂದು ಕೆಲವರು ಗುರುತಿಸಿದ್ದಾರೆ. ಇದಕ್ಕೆ ಬಸವಣ್ಣನವರಂತೆ ವಿವೇಕಾನಂದರೂ ಬ್ರಾಹ್ಮಣರನ್ನು, ಪುರೋಹಿತಶಾಹಿಯನ್ನು ಟೀಕಿಸಿ, ಯಾವುದೇ ಜಾತಿಭೇದವಿಲ್ಲದೇ ಸಾಮಾನ್ಯ ಜನರಿಗೂ ಜನಿವಾರದ ದೀಕ್ಷೆ ಕೊಟ್ಟರು. ಹೀಗೆ ವಿವೇಕಾನಂದ ಮತ್ತು ಬಸವಣ್ಣ ಇಬ್ಬರ ಕಾರ್ಯಪ್ರವೃತ್ತಿಯಲ್ಲಿ, ಸುಧಾರಣಾ ರೀತಿಯಲ್ಲಿ ಸಾಮ್ಯತೆ ಇದೆ. ಹಾಗಾಗಿ ಇವರೂ ಸಹ ಜಾತಿವ್ಯವಸ್ಥೆಯನ್ನು ಟೀಕಿಸುವ ಹಾಗೂ ಅದನ್ನು ವಿರೋಧಿಸುವ ಮೂಲಕ ಜಾತಿವಿನಾಶಕ್ಕೆ ಪ್ರಯತ್ನಿಸಿದ್ದರು' (ಇಂದುಕಲಾ, 2001, 86–87).

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E.Society's
Arts & Commerce College
GADAG-BETGERI-582101

ಈ ಮೇಲಿನ ಚಿಂತಕರು ವಿವೇಕಾನಂದರನ್ನು ಜಾತಿವ್ಯವಸ್ಥೆಯ ವಿರೋಧಿ ಎಂದು ಗುರುತಿಸುವಾಗ ಅವರು ಬ್ರಾಹ್ಮಣರನ್ನು ಟೀಕಿಸುವುದನ್ನು ಪ್ರಮುಖ ಆಧಾರವಾಗಿ ಪರಿಗಣಿಸವುದು ಗೋಚರಿಸುತ್ತದೆ. ಇದೇ ರೀತಿಯ ಅಭಿಪ್ರಾಯವನ್ನು ಜಿ.ಎಸ್.ಶಿವರುದ್ರಪ್ಪನವರೂ ಹಂಚಿಕೊಂಡಿದ್ದು, ಕುವೆಂಪುರವರು ವಿವೇಕಾನಂದರ ವಿಚಾರಗಳಿಂದ ಪ್ರಭಾವಿತವಾಗಿರುವುದನ್ನು ಈ ಕೆಳಗಿನಂತೆ ಹೇಳುತ್ತಾರೆ;

> "ಶ್ರೀ ರಾಮಕೃಷ್ಣ ವಿವೇಕಾನಂದರ ವಿಚಾರಗಳನ್ನು ತಾವು ಹುಟ್ಟಿಬಂದ ಪರಿಸರದ ಸಮುದಾಯಕ್ಕೆ ಪರಿಚಯ ಮಾಡಿಕೊಡುವುದರ ಮೂಲಕವೇ ಈ ಶ್ರೀ ಸಾಮಾನ್ಯರ ಬದುಕಿಗೆ ಒಂದು ಹೊಸ ಹುಟ್ಟನ್ನು ತರಬಹುದೆಂದು ಕುವೆಂಪು ಅವರ ದೃಢವಾದ ನಂಬಿಕೆಯಾಗಿತ್ತು. ಯಾಕೆಂದರೆ ವರ್ಣಾಶ್ರಮ, ಜಾತಿಪದ್ಧತಿ, ಚಾತುರ್ವಣ್ಯ ಮೊದಲಾದ ಮೂಢನಂಬಿಕೆಗಳ ಪುರೋಹಿತಶಾಹಿಯಿಂದ ಸಂಪೂರ್ಣವಾಗಿ ಪಾರಾದಂತೆ ಹಿಂದೂ ಮತವು ವೇದಾಂತ ದರ್ಶನವಾಗಿ, ವಿಶ್ವಧರ್ಮವಾಗಿ ಸರ್ವಧರ್ಮಗಳನ್ನೂ ಒಳಗೊಂಡು ನಿಜವಾದ ವಿಶ್ವಧರ್ಮವಾಗುತ್ತದೆ. ಅಲ್ಲಿಯವರೆಗೂ ಅದು ಶೂದ್ರಪೀಡಕರವಾಗಿ, ಪುರೋಹಿತಶಾಹಿ ಪೀಡೆಯ ಬ್ರಾಹ್ಮಣ್ಯ ಮಾತ್ರವಾಗಿರುತ್ತದೆ ಎನ್ನುವುದು ಕುವೆಂಪುರವರ ಸ್ವಾನುಭವ ಜನ್ಯವಾದ ನಿಲುವೂ ಆಗಿತ್ತು" (ಜಿ.ಎಸ್ ಶಿವರುದ್ರಪ್ಪ, 2011, ಕನ್ನಡದಲ್ಲಿ ಪರಮಹಂಸ ವಿವೇಕಾನಂದ ವಾಣಿ: ಕುವೆಂಪು).

ಹಿಂದೂ ಮತವು ಬ್ರಾಹ್ಮಣ ಪುರೋಹಿತಶಾಹಿಯಿಂದ ಅಸ್ತಿತ್ವಕ್ಕೆ ಬಂದಿರುವ ವರ್ಣ ಮತ್ತು ಜಾತಿವ್ಯವಸ್ಥೆಗಳಂತಹ ಮೂಢಾಚರಣೆಗೆ ತುತ್ತಾಗಿದೆ. ಈ ಪುರೋಹಿತಶಾಹಿ ಹುಟ್ಟುಹಾಕಿದ ಜಾತಿಪದ್ಧತಿ, ವರ್ಣಾಶ್ರಮ ಧರ್ಮ ಸಂಪೂರ್ಣವಾಗಿ ವಿನಾಶವಾದರೆ ಮಾತ್ರ ಹಿಂದೂಮತವು ವಿಶ್ವಧರ್ಮವಾಗಿ ಹೊರಹೊಮ್ಮುತ್ತದೆ ಎಂದು ವಿವೇಕಾನಂದರು ಹೇಳಿದ್ದರೆಂದು ಈ ಮೇಲಿನ ಉಲ್ಲೇಖದಲ್ಲಿ ಸೂಚ್ಯವಾಗಿದೆ. ಹೀಗೆ ಜಾತಿವ್ಯವಸ್ಥೆಯನ್ನು ಬ್ರಾಹ್ಮಣರು ಹಾಗೂ ಪುರೋಹಿತಶಾಹಿಯ ಜೊತೆಗೆ ಸಮೀಕರಿಸಿ, ಬ್ರಾಹ್ಮಣರ ಕುರಿತ ವಿವೇಕಾನಂದರ ಟೀಕೆಗಳನ್ನು ಜಾತಿವ್ಯವಸ್ಥೆಯ ವಿರೋಧಿ ನಿಲುವುಗಳನ್ನಾಗಿ ಪರಿಭಾವಿಸಲಾಗಿದೆ.

ಈ ಮೇಲಿನ ವಿವರಣೆಗಳನ್ನು ಗಮನಿಸಿದಾಗ, ವಿವೇಕಾನಂದರು ವರ್ಣವಿಭಜನೆ ಹಾಗೂ ಜಾತಿವ್ಯವಸ್ಥೆಯ ವಿರುದ್ಧ ಹೋರಾಡಿದ್ದರೆಂದು ವಾದಿಸುವ ಚಿಂತಕರು ಅದಕ್ಕೆ ಈಗಾಗಲೇ ಅಸ್ತಿತ್ವದಲ್ಲಿರುವ ಜಾತಿವ್ಯವಸ್ಥೆಯ ವಿವರಣೆಗಳನ್ನು ಬಳಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಅವುಗಳೆಂದರೆ; 'ಹಿಂದೂಯಿಸಂ ಸಾವಿರಾರು ವರ್ಷಗಳಿಂದ ಜಾತಿಪದ್ಧತಿಯೆಂಬ ಅಮಾನವೀಯ ವ್ಯವಸ್ಥೆಯನ್ನು ಪಾಲಿಸಿಕೊಂಡು ಬರುತ್ತಿದೆ', 'ವರ್ಣವ್ಯವಸ್ಥೆಯಿಂದ ಜಾತಿವ್ಯವಸ್ಥೆ ಹುಟ್ಟಿಕೊಂಡಿದ್ದು, ಮೂಲತಃ ವರ್ಣವ್ಯವಸ್ಥೆ ಉತ್ತಮವಾಗಿತ್ತು ಹಾಗೂ ಬದಲಾವಣೆಗೆ ಅವಕಾಶಗಳಿದ್ದವು. ಬ್ರಾಹ್ಮಣರು ತಮ್ಮ ಶ್ರೇಷ್ಠತೆಯನ್ನು ಉಳಿಸಿಕೊಳ್ಳಲು ಇದನ್ನು ಒಂದು ನಿರ್ಬಂಧವೆಂಬಂತೆ ಇತರರ ಮೇಲೆ ಹೇರಿದರು', 'ಬ್ರಾಹ್ಮಣರು ತಮ್ಮನ್ನು ಸಮಾಜದಲ್ಲಿ ಶ್ರೇಷ್ಠರೆಂದು ಗುರುತಿಸಿಕೊಂಡು ಕೆಲವು ವಿಶೇಷ ಹಕ್ಕುಗಳನ್ನು ಹೊಂದಿದ್ದರು, ಕೆಳಜಾತಿಗಳು ಆ ಹಕ್ಕುಗಳಿಂದ ವಂಚಿತವಾಗಿದ್ದವು. ಉದಾಹರಣೆಗೆ ಸಂಸ್ಕೃತ ಕಲಿಕೆ, ವೇದಗಳ ಅಧ್ಯಯನ, ದೇವಾಲಯ ಪ್ರವೇಶ ಇತ್ಯಾದಿ.' 'ಜಾತಿವ್ಯವಸ್ಥೆಯ ಕಾರಣದಿಂದಾಗಿ ಕೆಲವು ಜಾತಿಗಳು ಅಂದರೆ ದೀನ-ದಲಿತರು ಅಸ್ಪೃಶ್ಯ ಜಾತಿಗಳೆಂದು ಶತಮಾನಗಳಿಂದ ಶೋಷಣೆಗೊಳಗಾಗಿದ್ದಾರೆ', 'ಈ ಅವ್ಯವಸ್ಥೆಯ ವಿರುದ್ಧ ಹಲವು ಶತಮಾನದಿಂದ ಬುದ್ಧ ಬಸವರಾದಿಯಾಗಿ ಸಮಾಜ ಸುಧಾರಕರು ಹೋರಾಟ ನಡೆಸಿದ್ದಾರೆ' ಎನ್ನಲಾಗುತ್ತದೆ.

ವಿವೇಕಾನಂದರೂ ಸಹ ಈ ಜಾತಿವ್ಯವಸ್ಥೆಯ ವಿರುದ್ಧ ಹೋರಾಡಿದವರಲ್ಲಿ ಪ್ರಮುಖರೆಂದು ಗುರುತಿಸಲಾಗಿದೆ. ಇದಕ್ಕೆ ಅವರು 'ಬ್ರಾಹ್ಮಣರನ್ನು, ಅವರ ಅಸ್ಪೃಶ್ಯತಾ ಆಚರಣೆಯನ್ನು ಕಟುವಾಗಿ ಟೀಕಿಸಿದ್ದಾರೆ.' 'ಬ್ರಾಹ್ಮಣರಿಗೆ ಮಾತ್ರ ಮೀಸಲಾಗಿದ್ದ ಸಂಸ್ಕೃತ ಭಾಷೆಯ ಕಲಿಕೆಯನ್ನು ಪ್ರತಿಯೊಬ್ಬರಿಗೂ ಕಲಿಸಬೇಕೆಂದು ಹೇಳುತ್ತಾರೆ.' 'ಜಾತಿ ತಾರತಮ್ಯದ ವಿರುದ್ಧವಾಗಿ ಮಾತನಾಡುತ್ತಾರೆ.' 'ವರ್ಣಾಶ್ರಮ ಧರ್ಮವನ್ನು ವಿರೋಧಿಸಿ ಅದರ ಮೇಲೋತ್ಪಾಟನೆಗೆ ಪ್ರಯತ್ನಿಸಿದ್ದಾರೆ' ಇತ್ಯಾದಿ ವಿವರಣೆಗಳು ವಿವೇಕಾನಂದರು ಜಾತಿವಿರೋಧಿಯಾಗಿದ್ದರು ಎನ್ನುವುದಕ್ಕೆ ಆಧಾರವಾಗಿ ಬಂದು ನಿಲ್ಲುತ್ತವೆ. ಇವುಗಳನ್ನಾಧರಿಸಿ ಪ್ರಗತಿಪರ ಚಿಂತಕರು ವಿವೇಕಾನಂದರನ್ನು ಜಾತಿವ್ಯವಸ್ಥೆಯ ನಿರ್ಮೂಲನಕ್ಕೆ ಪ್ರಯತ್ನಿಸಿದ್ದ ಸುಧಾರಕರೆಂದು ಗುರುತಿಸುತ್ತಿದ್ದಾರೆ. ಮತ್ತೊಂದೆಡೆ ವಿವೇಕಾನಂದರು ಜಾತಿವಾದಿ ಆಗಿದ್ದರೆಂಬ ನಿಲುವುಗಳೂ ಅಸ್ತಿತ್ವದಲ್ಲಿವೆ. ಅಂದರೆ' ವಿವೇಕಾನಂದರು ಜಾತಿಯನ್ನು ಸಾಮಾಜಿಕ ಸಂಸ್ಥೆಯನ್ನಾಗಿ ಸಮರ್ಥಿಸಿದರು. ಅಷ್ಟೆ ಅಲ್ಲದೇ ವಿವೇಕಾನಂದರು ಬ್ರಾಹ್ಮಣರನ್ನು ಅನ್ಯಾಯ ಶೋಷಣೆಯ ಸಂಕೇತವಾಗಿಯೂ ಹಾಗೂ ಅತ್ಯುನ್ನತ ಮೌಲ್ಯಗಳ ಸಾಕಾರ ರೂಪವನ್ನಾಗಿಯೂ ನೋಡುತ್ತಾರೆ' (Andrew O. Fort Source: 2002: 318). ಹೀಗೆ ವಿವೇಕಾನಂದರನ್ನು ಜಾತಿವಿರೋಧಿಯನ್ನಾಗಿ ಹಾಗೂ ಜಾತಿ ಸಮರ್ಥಕರಾಗಿಯೂ ನೋಡಲಾಗುತ್ತಿದೆ.

ವಿವೇಕಾನಂದರನ್ನು ಒಂದೆಡೆ ಜಾತಿ ಸಮರ್ಥಕರನ್ನಾಗಿ ಗುರುತಿಸಿ, ಅದೇ ಸಂದರ್ಭದಲ್ಲಿ ಮತ್ತೊಂದೆಡೆ ಅವರನ್ನು ಜಾತಿವಿರೋಧಿ ಚಳವಳಿಯ ನಾಯಕನೆಂದು ಗುರುತಿಸುತ್ತಿರುವುದು ವೈರುಧ್ಯಪೂರ್ಣವಾಗಿದೆ. ಅಂದರೆ ಏಕಕಾಲಕ್ಕೆ ಓರ್ವನು ಜಾತಿ ಸಮರ್ಥಕನಾಗಿ ಜಾತಿ ವಿರೋಧಿಯೂ ಆಗಿರಲು ಹೇಗೆ ಸಾಧ್ಯ? ಇದನ್ನು ಅರ್ಥೈಸಿಕೊಳ್ಳಲು ಜಾತಿ ಮತ್ತು ವರ್ಣದ ಕುರಿತು ವಿವೇಕಾನಂದರು ಏನು ಹೇಳಿದ್ದಾರೆಂಬುದನ್ನು ಪರಿಶೀಲಿಸುವುದು ಅಗತ್ಯವಾಗಿದೆ.

## ವಿವೇಕಾನಂದರ ಚಿಂತನೆಯಲ್ಲಿ ವರ್ಣ ಮತ್ತು ಜಾತಿ:

ಈ ಮೇಲೆ ಗಮನಿಸಿದಂತೆ ವಿವೇಕಾನಂದರನ್ನು ಜಾತಿವಿರೋಧಿ ಹೋರಾಟಗಾರ ಹಾಗೂ ಜಾತಿ ಸಮರ್ಥಕ ಎಂದು

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E.Society's
Arts & Commerce College
GADAG

ಗುರುತಿಸಲಾಗುತ್ತಿದೆ. ಪ್ರಗತಿಪರ ಚಿಂತಕರು ಮಾತ್ರವಲ್ಲದೇ ವಿವೇಕಾನಂದರನ್ನು ಓರ್ವ ಅಪ್ಪಟ ಹಿಂದೂ ಮತ ಪ್ರಚಾರಕನೆಂದು ಗುರುತಿಸುವವರೂ ಸಹ ಅವರನ್ನು ಜಾತಿವಾದಿ ಎಂದು ಗುರುತಿಸುವುದನ್ನು ನಿರಾಕರಿಸಿ, ಜಾತಿವ್ಯವಸ್ಥೆಯನ್ನು ವಿರೋಧಿಸುತ್ತಿದ್ದರು ಎಂದು ಒಪ್ಪಿಕೊಳ್ಳುತ್ತಾರೆ. ಮತ್ತೊಂದೆಡೆ, ಸ್ವತಃ ವಿವೇಕಾನಂದರೇ ತಾವು ಸಮಾಜ ಸುಧಾರಕರೂ ಅಲ್ಲ, ತಾವು ಜಾತಿವಿನಾಶಕ್ಕೂ ಪ್ರಯತ್ನಿಸುವುದಿಲ್ಲವೆಂದು ಹೇಳಿಕೊಳ್ಳುವುದು ಪ್ರಚಲಿತ ನಿರೂಪಣೆಗಳ ಕುರಿತೇ ಅನುಮಾನ ಹುಟ್ಟಿಸುತ್ತದೆ:

> "ನಮ್ಮ ದೇಶದ ಜನರ ಮನಸ್ಸನ್ನು ಹಲವು ಶತಮಾನಗಳಿಂದ ಬಹಳ ಕಾಡುತ್ತಿರುವ ಜಾತಿಪದ್ಧತಿ, ಸಮಾಜ ಸುಧಾರಣೆಗೆ ಸಂಬಂಧಪಟ್ಟ ಕೆಲವು ಜಟಿಲ ಸಮಸ್ಯೆಗಳು ಉದ್ಭವವಾಗುತ್ತವೆ. ನಾನು ಸಮಾಜ ಸುಧಾರಕನೂ ಅಲ್ಲ, ಜಾತಿಪದ್ಧತಿಯನ್ನು ನಾಶಮಾಡುವವನೂ ಅಲ್ಲ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ನಿಮ್ಮ ಜಾತಿಪದ್ಧತಿಗೂ, ಸಮಾಜ ಸುಧಾರಣೆಗೂ ನನಗೂ ನೇರವಾದ ಯಾವ ಸಂಬಂಧವೂ ಇಲ್ಲ" (ಸ್ವಾಮಿ ವಿವೇಕಾನಂದರು, ಸಂಪುಟ-3, 1985, 78).

ವಿವೇಕಾನಂದರೇ ಹೇಳಿಕೊಳ್ಳುವಂತೆ ಅವರು ಜಾತಿವಿನಾಶವಾಗುವುದನ್ನು ಬಯಸಿರಲಿಲ್ಲ, ಅದರ ವಿರುದ್ಧವೂ ಹೋರಾಡಿರಲಿಲ್ಲ. ಅಷ್ಟೇ ಅಲ್ಲದೇ 'ಜಾತಿವ್ಯವಸ್ಥೆಯ ವಿರುದ್ಧ ಹೋರಾಟ ಮಾಡುವ ಸಮಾಜ ಸುಧಾರಕರ ಪ್ರಯತ್ನಗಳು ವಿಫಲವಾಗುತ್ತಿರುವುದಕ್ಕೆ ಅವರು ಹಿಂದೂಧರ್ಮದ ಮೇಲೆ ಮಾಡುತ್ತಿರುವ ಆರೋಪ ಮತ್ತು ನಿಂದನೆಗಳೇ ಕಾರಣವಾಗಿವೆ. ಐತಿಹಾಸಿಕವಾಗಿ ನಾವು ಪಡೆದಿರುವ ಜನಾಂಗೀಯ ಲಕ್ಷಣಗಳನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಬೇಕು, ನಾವು ಅನ್ಯರಿಂದ ಎಷ್ಟೋ ವಿಚಾರಗಳನ್ನು ಕಲಿತುಕೊಳ್ಳಬೇಕಾಗಿದೆ, ಆದರೆ ವಿವೇಚನೆಯಿಲ್ಲದೇ ಪಾಶ್ಚಾತ್ಯರು ಹೇಳಿರುವುದನ್ನು ಅನುಕರಿಸುವುದು ಸರಿಯಲ್ಲ. ಅವರ ಉದ್ದೇಶ ಒಳ್ಳೆಯದೇ ಆಗಿದ್ದರೂ ಅವರ ಮಾರ್ಗಗಳು ಪಾಶ್ಚಾತ್ಯ ವಿಚಾರಗಳಿಂದ ಪ್ರಭಾವಗೊಂಡಿದ್ದು, ಅವು ಭಾರತೀಯ ಸಮಾಜದಲ್ಲಿ ವಿಫಲವಾಗುತ್ತಿವೆ' ಎಂಬುದು ವಿವೇಕಾನಂದರ ನಿಲುವಾಗಿತ್ತು (ಅದೇ, 78).

### * ಆಧ್ಯಾತ್ಮದ ಮಾರ್ಗದರ್ಶಕವಾಗಿ ವರ್ಣವ್ಯವಸ್ಥೆ:

**ವರ್ಣಾಶ್ರಮ ಹಾಗೂ ವರ್ಣವಿಭಜನೆಯ ಕುರಿತು ವಿವೇಕಾನಂದರ ವಿಚಾರಗಳು ಪ್ರಚಲಿತದಲ್ಲಿ ಅಸ್ತಿತ್ವದಲ್ಲಿರುವ ವಿವರಣೆಗಳಿಗಿಂತ ಭಿನ್ನವಾಗಿರುವಂತೆ ತೋರುತ್ತವೆ. ವರ್ಣವು ಒಂದು ಜನಾಂಗವನ್ನು ರಕ್ಷಿಸಲು ಅವಶ್ಯಕವಾಗಿದ್ದ ಸಂಸ್ಥೆಯೆಂದು ವಿವೇಕಾನಂದರುಹೇಳುತ್ತಾರೆ. ಇವರ ಪ್ರಕಾರ ಭಾರತೀಯ ಸಮಾಜದ ತಳಹದಿ ವರ್ಣವ್ಯವಸ್ಥೆಯಾಗಿದ್ದು, ಅದು ಹುಟ್ಟಿನಿಂದಲೇ ನಿರ್ಧಾರಿತವಾಗುತ್ತಿತ್ತು.**

> ಭಾರತದ ಸಾಮಾಜಿಕ ತಳಹದಿ ಯಾವುದು? ವರ್ಣವ್ಯವಸ್ಥೆ. ನಾನು ವರ್ಣದಲ್ಲಿ ಹುಟ್ಟಿರುವುದು, ವರ್ಣಕ್ಕೇ ಬದುಕಿರುವುದು. ಇಲ್ಲಿ ನನ್ನನ್ನು ಕುರಿತು ಹೇಳುತ್ತಿಲ್ಲ. ನಾನು ಸಂನ್ಯಾಸಿಯಾದುದರಿಂದ ವರ್ಣಾತೀತ. ಯಾರು ಸಮಾಜದಲ್ಲಿರುವರೋ ಅವರಿಗೆ ಇದು ಅನ್ವಯಿಸುವುದು. ಒಂದು ವರ್ಣದಲ್ಲಿ ಹುಟ್ಟಿದ ಮೇಲೆ ಇಡೀ ಜೀವನವನ್ನೆಲ್ಲಾ ಅದರ ನಿಯಮಾನುಸಾರ ಕಳೆಯಬೇಕು. (ಸ್ವಾಮಿ ವಿವೇಕಾನಂದರು, ಸಂಪುಟ–(7), 2013, 157).

ಹೀಗೆ ವರ್ಣವ್ಯವಸ್ಥೆಯು ಭಾರತೀಯ ಸಮಾಜದ ತಳಹದಿಯಾಗಿದೆ. ಆದರೆ ಸಮಾಜದಲ್ಲಿರುವವರಿಗೆ ಮಾತ್ರ ವರ್ಣವಿಭಜನೆ ಅನ್ವಯಿಸುತ್ತದೆ ಎಂದು ವಿವೇಕಾನಂದರು ಹೇಳುತ್ತಾರೆ. ಅಂದರೆ ಆಧ್ಯಾತ್ಮಿಕ ಮಾರ್ಗದಲ್ಲಿರುವವರಿಗೆ ಅಥವಾ ಸಂನ್ಯಾಸಿಗಳಿಗೆ ಈ ವರ್ಣವ್ಯವಸ್ಥೆಯ ನಿಯಮಗಳು ಅನ್ವಯವಾಗುವುದಿಲ್ಲ ಎನ್ನುತ್ತಾರೆ. ಅಷ್ಟೆ ಅಲ್ಲದೇ ಸಮಾಜದಲ್ಲಿರುವವರು ಈ ವರ್ಣವ್ಯವಸ್ಥೆಯನ್ನು ಏಕೆ ಅನುಸರಿಸಬೇಕೆಂದರೆ; 'ಈ ವರ್ಣಗಳು ನಮ್ಮ ಜನಾಂಗವನ್ನು ರಕ್ಷಿಸುವುದಕ್ಕೆ ಒಂದು ಕಾಲದಲ್ಲಿ ಅವಶ್ಯಕವಾಗಿತ್ತು. ಎಂದು ಈ ಅವಶ್ಯಕತೆ ಹೋಗುವುದೋ ಈ ಸಂಸ್ಥೆಗಳೆಲ್ಲಾ ಸ್ವಾಭಾವಿಕವಾಗಿ ಮಾಯವಾಗುವುದು. ಅತ್ಯಂತ ಮೇಲಿನ ವರ್ಣದಲ್ಲಿರುವವನು ಮತ್ತು ಅತ್ಯಂತ ಕೆಳವರ್ಣದಲ್ಲಿರುವವನು ಕೂಡ ಭಾರತ ದೇಶದಲ್ಲಿ ಸಂನ್ಯಾಸಿಯಾಗಬಹುದು. ಆಗ ಇಬ್ಬರೂ ಒಂದೇ ಆಗುವರು. ವರ್ಣದ ಮುಖ್ಯ ಉದ್ದೇಶ ಪ್ರತಿಯೊಬ್ಬನನ್ನು ಬ್ರಾಹ್ಮಣನನ್ನಾಗಿ ಮಾಡುವುದು' (ವಿವೇಕಾನಂದರು, 1998, 66–67). [2]

ಹೀಗೆ ವರ್ಣವು ಪ್ರತಿಯೊಬ್ಬರನ್ನೂ ಬ್ರಾಹ್ಮಣರನ್ನಾಗಿ ಮಾಡುವ ಉದ್ದೇಶವನ್ನು ಹೊಂದಿರುವುದರಿಂದ ಅದನ್ನು ಪಾಲಿಸುವುದು ಅಗತ್ಯವಾಗಿದೆ. ಇಲ್ಲಿ 'ಬ್ರಾಹ್ಮಣನೆಂದರೆ ಸಂಸಾರಿಕತೆಯನ್ನು ತೊರೆದು, ಆಧ್ಯಾತ್ಮಿಕ ಸಂಪನ್ನನಾದ ಜ್ಞಾನಿಯಾಗಿದ್ದಾನೆ' (ಸ್ವಾಮಿ ವಿವೇಕಾನಂದ, ಸಂಪುಟ-3, 2013, 80). ಪ್ರತಿಯೊಬ್ಬರನ್ನೂ ಈ ರೀತಿಯ ಬ್ರಾಹ್ಮಣನನ್ನಾಗಿ ಮಾಡುವುದಕ್ಕಾಗಿಯೇ ವರ್ಣಗಳು ಅಸ್ತಿತ್ವದಲ್ಲಿವೆ. ಜೊತೆಗೆ ವರ್ಣವ್ಯವಸ್ಥೆಯು ಹಿಂದೂಮತಕ್ಕೆ ಮಾತ್ರ ಸೀಮಿತವಾಗಿರುವ ಸಂಗತಿಯಲ್ಲ, ಅದು ಎಲ್ಲೆಡೆಯೂ ಇರುವಂತಹ ಒಂದು ಸಾಮಾನ್ಯ ಸಂಗತಿಯಾಗಿದೆ. ಭಾರತದಲ್ಲಿರುವ ವರ್ಣವ್ಯವಸ್ಥೆಯು ಒಂದು ಜನಾಂಗದ ರಕ್ಷಣೆಗಾಗಿ ಅಸ್ತಿತ್ವಕ್ಕೆ ಬಂದಿದ್ದಾಗಿದ್ದು, ಪ್ರತಿಯೊಬ್ಬರಿಗೂ ವರ್ಣಾತೀತರಾಗಲು, ಆಧ್ಯಾತ್ಮ ಸಾಧನೆ ಮಾಡಲು ಇಲ್ಲಿ ಅವಕಾಶಗಳಿವೆ. ಹಾಗಾಗಿ ಭಾರತದಲ್ಲಿನ ವರ್ಣವ್ಯವಸ್ಥೆ ಉತ್ತಮವಾಗಿದ್ದು, ಅದನ್ನು ಪಾಲಿಸಬೇಕೆಂಬುದು ವಿವೇಕಾನಂದರ ನಿಲುವು. ಹಾಗೆಯೇ 'ವರ್ಣವ್ಯವಸ್ಥೆಯನ್ನು ನಾಶಮಾಡಬೇಕು ಎಂದು ಹಲವಾರು ಸುಧಾರಕರು ಪ್ರಯತ್ನಿಸಿದ್ದರು. ಆದರೆ ಈ ವರ್ಣ ಪರಿಕಲ್ಪನೆಯ ಬಗ್ಗೆ ಯಾರಿಗೂ ಸ್ಪಷ್ಟತೆ ಇಲ್ಲದ ಕಾರಣ ಹಾಗೂ ವರ್ಣವನ್ನು ಧರ್ಮ (ರಿಲಿಜನ್ ಎನ್ನುವ ಅರ್ಥದಲ್ಲಿ) ಎಂದು ತಪ್ಪಾಗಿ ಗ್ರಹಿಸಿದ್ದರಿಂದ ಅವರ ಪ್ರಯತ್ನಗಳು ವೈಫಲ್ಯದ ದಾರಿ ಹಿಡಿದವು' (ಸ್ವಾಮಿ ವಿವೇಕಾನಂದರು, 1998, 66) ಎಂಬುದಾಗಿ ತಿಳಿಸಿದ್ದಾರೆ.

ಜಾತಿವ್ಯವಸ್ಥೆಯ ವಿವರಣೆಗಳೂ ಸಹ ವಚನಕಾರರು, ನಮ್ಮ ಆಚಾರ್ಯರು, ಗೌತಮ ಬುದ್ಧ ಮೊದಲಾದವರು ಜಾತಿ ಹಾಗೂ

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E.Society's
Arts & Commerce College
GADAG-BETGERI-582101

ವರ್ಣವ್ಯವಸ್ಥೆಯ ವಿರುದ್ಧ ಹೋರಾಡಿದ್ದರು. ಕಾಲಾನಂತರ ಆ ಚಳವಳಿಗಳು ಜಾತಿಪದ್ಧತಿಯನ್ನು ನಾಶಮಾಡುವಲ್ಲಿ ವಿಫಲವಾದವು ಎಂದು ಹೇಳುತ್ತವೆ. ಆದರೆ ಈ ವೈಫಲ್ಯಕ್ಕೆ ನೀಡುವ ಕಾರಣಗಳಲ್ಲಿ ವಿವೇಕಾನಂದರು ಪ್ರಚಲಿತ ಚಿಂತಕರಿಂದ ಭಿನ್ನವಾಗುತ್ತಾರೆ. ಇವರ ಪ್ರಕಾರ ಚಳವಳಿಗಳ ವಿಫಲತೆಗೆ ವರ್ಣ ಪರಿಕಲ್ಪನೆಯನ್ನು ತಪ್ಪಾಗಿ ಗ್ರಹಿಸಿರುವುದೇ ಕಾರಣವಾಗಿದೆ.ಇದರ ಜೊತೆಗೆ ಜಾತಿವಿನಾಶ ಚಳವಳಿಯೆಂದು ಗುರುತಿಸಲಾಗಿರುವ ಬೌದ್ಧ ಧರ್ಮವೂ ಸಹ ವೇದ ಉಪನಿಷತ್ತುಗಳ ಮೇಲೆ ಹಾಗೂ ಬ್ರಾಹ್ಮಣರ ತತ್ವಾದರ್ಶಗಳ ಮೇಲೆ ನಿಂತಿದೆ ಎಂಬುದನ್ನು ಗುರುತಿಸಿದ್ದಾರೆ. ಜಾತಿವ್ಯವಸ್ಥೆಯ ಇದುವರೆಗಿನ ಕಥೆಗಳಲ್ಲಿ ಈ ರೀತಿಯ ವಿವರಣೆಗಳು ಕಂಡುಬರುವುದಿಲ್ಲ. ಇದರ ಬದಲಾಗಿ ಆರಂಭದಲ್ಲಿ ಆಚಾರ್ಯರುಗಳ ಜಾತಿವಿನಾಶ ಕಾರ್ಯ ಯಶಸ್ವಿಯಾಗಿದ್ದು ನಂತರ ಪುರೋಹಿತಶಾಹಿಯ ಪ್ರಭಾವದಿಂದ ಅದು ವಿಫಲವಾಯಿತು ಎನ್ನುವ ವಿವರಣೆಗಳು ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ವಿವೇಕಾನಂದರ ಅಭಿಪ್ರಾಯಗಳು ಜಾತಿವ್ಯವಸ್ಥೆಯ ವಿವರಣೆಗಳಿಗಿಂತ ಭಿನ್ನವಾಗಿ ಗೋಚರಿಸುತ್ತವೆ.

- **ಉತ್ತಮ ಸಮಾಜಕ್ಕೆ ಅಗತ್ಯವಾದ ಜಾತಿಪದ್ಧತಿ:**

ವರ್ಣದ ಸಂದರ್ಭದಲ್ಲಿನ ಈ ಮೇಲಿನ ವಿವೇಕಾನಂದರ ಅಭಿಪ್ರಾಯಗಳು ಜಾತಿಯ ಕುರಿತೂ ಪುನಾರವರ್ತನೆಗೊಂಡಿವೆ. ಭಾರತದಂತಹ ವೈವಿಧ್ಯಮಯ ಸಮಾಜದಲ್ಲಿ ಮನುಷ್ಯರು ಜಾತಿಗಳಾಗಿ ವಿಭಾಗವಾಗಬೇಕಿದೆ. ಮಾನವನು ತನ್ನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಜಾತಿ ಒಂದೇ ಏಕೈಕ ಮಾರ್ಗವಾಗಿದೆ. ಇದು ಬೇರೆ ದೇಶಗಳಲ್ಲಿರುವ ವರ್ಗೀಕರಣಕ್ಕಿಂತ ಉತ್ತಮವಾಗಿದೆ ಎಂದು ಪ್ರತಿಪಾದಿಸುವುದನ್ನು ನೋಡವುದಾದರೆ:

> "ಹಲವು ಶತಮಾನಗಳಿಂದ ಪೆಟ್ಟು ತಿಂದು ಜರ್ಝರಿತವಾದ ಜನಾಂಗದ ಮೇಲೆ ನಿಂದೆಯ ಮಳೆಯನ್ನು ಕರೆಯಬೇಡಿ. ನಮ್ಮ ಸಮಾಜದಲ್ಲಿರುವ ಅತೀ ಮೂಢವಾಗಿರುವ ವಿಚಾರಹೀನವಾಗಿರುವ ಯಾವ ಆಚಾರ ವ್ಯವಹಾರಗಳನ್ನೂ ದೂರಬೇಡಿ, ಅವೂ ಕೂಡ ಹಿಂದೆ ಉಪಕಾರ ಮಾಡಿದ್ದವು. ಮಾತ್ತಾವ ದೇಶದಲ್ಲಿ ಸಂಸ್ಥೆಯ ಆದರ್ಶವೂ ಇಲ್ಲಿಗಿಂತ ಉತ್ತಮವಾಗಿಲ್ಲ ಎಂಬುದನ್ನು ಗಮನದಲ್ಲಿಡಿ. ನಾನು ಎಲ್ಲಾ ದೇಶಗಳಲ್ಲಿಯೂ ಜಾತಿಗಳನ್ನು ನೋಡಿರುವೆನು. ಆದರೆ ಎಲ್ಲಿಯೂ ಇಲ್ಲಿರುವಂತಹ ಯೋಜನೆಯಾಗಲಿ, ಆದರ್ಶವಾಗಲಿ ಇಲ್ಲ" (ಸ್ವಾಮಿ ವಿವೇಕಾನಂದ, ಸಂ–3, 1985, 87). [3]

ಜಾತಿಗಳು ಸಹ ಎಲ್ಲಾ ದೇಶಗಳಲ್ಲಿಯೂ ಇವೆ. ಅಂದರೆ ಜನರು ಗುಂಪುಗುಂಪಾಗಿ ವರ್ಗೀಕೃತವಾಗಿರುವುದು. ಆದರೆ ಅವುಗಳ ವರ್ಗೀಕರಣದ ಲಕ್ಷಣಗಳನ್ನು ಗಮನಿಸಿದಾಗ ಪಾಶ್ಚಿಮಾತ್ಯ ಅಥವಾ ಇತರ ರಾಷ್ಟ್ರಗಳಲ್ಲಿ ಹಣದ ಮೇಲೆ ಜಾತಿ ನಿರ್ಧರಿತವಾಗುತ್ತದೆ. ಭಾರತದಲ್ಲಿ ಪಾವಿತ್ರ್ಯತೆ, ತ್ಯಾಗ ಮೊದಲಾದ ಅಂಶಗಳ ಮೇಲೆ ನಿಂತಿರುತ್ತದೆ. ಆದ್ದರಿಂದ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹೋಲಿಸಿದಾಗ ಭಾರತದಲ್ಲಿನ ಜಾತಿಗಳೇ ಉತ್ತಮವಾಗಿವೆ ಎನ್ನುವುದು ವಿವೇಕಾನಂದರ ಅಭಿಪ್ರಾಯವಾಗಿದೆ. ಹಾಗಾದರೆ ಭಾರತದಲ್ಲಿ ಜಾತಿಗಳ ಅಸ್ತಿತ್ವಕ್ಕೆ ಕಾರಣವೇನು? ಅವುಗಳ ಸ್ವರೂಪವೇನು? ಎಂಬುದಕ್ಕೆ ವಿವೇಕಾನಂದರ ಉತ್ತರವನ್ನು ಈ ಮುಂದಿನಂತೆ ನೋಡಬಹುದು:

> "ಸ್ವಾಭಾವಿಕವಾಗಿ ಭರತಖಂಡದಲ್ಲಿ ಇರುವ ಪರಿಸ್ಥಿತಿಗಳಿಗನುಸಾರವಾಗಿ ಹಲವು ಪಂಗಡಗಳು ಇರಲೇಬೇಕು. ವಾಸ್ತವವಾಗಿ ಹಲವು ಪಂಗಡಗಳಿವೆ. ಒಬ್ಬರು ಮತ್ತೊಬ್ಬರೊಂದಿಗೆ ವ್ಯಾಜ್ಯವಾಡುವುದಿಲ್ಲ. ಇದೊಂದು ವಿಚಿತ್ರ, ವೈಷ್ಣವರು ನರಕಕ್ಕೆ ಹೋಗುತ್ತಾರೆಂದು ಶೈವ ಹೇಳುವುದಿಲ್ಲ. ಶೈವನು ಇದು ನನ್ನ ದಾರಿ, ನಿನ್ನದು ಬೇರೆ ದಾರಿ ಇದೆ, ಕೊನೆಗೆ ನಾವಿಬ್ಬರೂ ಸಂಧಿಸುವೆವು ಎನ್ನುವನು. ಭರತಖಂಡದಲ್ಲಿ ಎಲ್ಲಾರಿಗೂ ಇದು ಗೊತ್ತಿದೆ. ಇದೇ ಇಷ್ಟದೇವತಾ ಸಿದ್ಧಾಂತ" (ಸ್ವಾಮಿ ವಿವೇಕಾನಂದ, ಸಂ–3, 1985, 25–26).

ಭಾರತದಲ್ಲಿ ಹಲವಾರು ಜನಾಂಗಗಳಿದ್ದು ಅವರೆಲ್ಲರ ಆಚಾರ, ವ್ಯವಹಾರ, ಭಾಷೆ, ಉಡುಗೆ ಮೊದಲಾವುಗಳಲ್ಲಿ ಹಲವಾರು ವ್ಯತ್ಯಾಸಗಳಿವೆ. ಆ ವ್ಯತ್ಯಾಸಗಳಿಗನುಗುಣವಾಗಿ ಹಲವಾರು ಜಾತಿಗಳು ಅಸ್ತಿತ್ವದಲ್ಲಿವೆ. ಹಾಗೆಯೇ 'ಪ್ರತಿಯೊಂದು ಜಾತಿಯೂ ಬೇರೆಯೇ ಒಂದು ಜನಾಂಗವಾಗಿದೆ. ಒಂದೇ ಜಾತಿಯಲ್ಲಿ ಕೂಡ ಆಚಾರ ವ್ಯವಹಾರಗಳಲ್ಲಿ ಎಷ್ಟೋ ವ್ಯತ್ಯಾಸವಿದೆ. ಈ ಜಾತಿಗಳೆಲ್ಲ ಪ್ರತ್ಯೇಕ ಪ್ರತ್ಯೇಕವಾಗಿವೆ. ಸಾಮಾಜಿಕವಾಗಿ ಒಟ್ಟಿಗೆ ಕಲೆಯುವರು. ಆದರೆ ಸಹಪಂಕ್ತಿ ಇಲ್ಲ, ಹೆಣ್ಣು ಕೊಡುವ ಅಥವಾ ತರುವ ವಾಡಿಕೆ ಇಲ್ಲ. ಈ ವಿಷಯದಲ್ಲಿ ಅವರು ಸಂಪೂರ್ಣ ಪ್ರತ್ಯೇಕ ಪ್ರತ್ಯೇಕವಾಗಿರುವರು. ಒಬ್ಬರಿಗೂ ಮತ್ತೊಬ್ಬರಿಗೂ ವ್ಯವಹಾರವಿರುವುದು, ಸ್ನೇಹವಿರುವುದು, ಅಲ್ಲಿಗೆ ಕೊನೆ' (ಸ್ವಾಮಿ ವಿವೇಕಾನಂದರು, ಸಂಪುಟ–(7), 2013, 150). ಅಂದರೆ ವಿಭಿನ್ನತೆಗನುಗುಣವಾಗಿ ಜಾತಿಗಳು ರಚನೆಯಾಗಿದ್ದು, ಅವುಗಳ ನಡುವೆ ವ್ಯತ್ಯಾಸವಿದೆ, ಅವುಗಳೆಲ್ಲಾ ಪ್ರತ್ಯೇಕವಾಗಿಯೇ ಇರುತ್ತವೆ. ಆದರೆ ಅವುಗಳ ನಡುವೆ ಸಂಘರ್ಷಗಳಾಗಲೀ, ಅಸಹಿಷ್ಣುತೆಯಾಗಲೀ ಇರಲಿಲ್ಲ ಬದಲಾಗಿ ವ್ಯವಹಾರಿಕ ಸಂಬಂಧವಿರುತ್ತದೆ ಎಂಬುದು ವಿವೇಕಾನಂದರ ವಿಚಾರಗಳಲ್ಲಿ ಸ್ಪಷ್ಟವಾಗುತ್ತದೆ.

ಹೀಗೆ ವಿವೇಕಾನಂದರು ಜಾತಿಯು ಭಾರತೀಯ ಸಮಾಜದ ಕಂಟಕ, ಅನಾಗರಿಕ ವ್ಯವಸ್ಥೆಯೆಂಬುದನ್ನು ತಿರಸ್ಕರಿಸಿ, ಇದು ಎಲ್ಲಾ ರಾಷ್ಟ್ರಗಳಲ್ಲಿಯೂ ಇರುವಂತಹ ಒಂದು ಸಾಮಾನ್ಯ ವಿಭಜನೆಯೆಂದು ಪರಿಭಾವಿಸುತ್ತಾರೆ. ಇಷ್ಟೇ ಅಲ್ಲದೇ ಭಾರತದಲ್ಲಿನ ಜಾತಿ ವಿಭಜನೆಯು ಬೇರೆ ಸಮಾಜಗಳಿಗಿಂತಲೂ ಉತ್ತಮವಾಗಿದ್ದು, ಯಾವುದೋ ಒಂದು ಆದರ್ಶವನ್ನಿಟ್ಟುಕೊಂಡು ಅಸ್ತಿತ್ವಕ್ಕೆ ಬಂದಿರುವಂತಹದ್ದಾಗಿದೆ. ಒಂದು ಉತ್ತಮ ಸಮಾಜಕ್ಕೆ ಈ ರೀತಿಯ ವಿಭಜನೆ ಅಗತ್ಯವಾಗಿದೆ. ಹಾಗೂ ಅವುಗಳ ಅವಶ್ಯಕತೆ ಇಲ್ಲದಿರುವಾಗ ತಾವಾಗಿಯೇ ಕಣ್ಮರೆಯಾಗುತ್ತವೆ ಎನ್ನುತ್ತಾರೆ. ಒಟ್ಟಾರೆಯಾಗಿ ಜಾತಿಯಅಸ್ತಿತ್ವವು ಅಗತ್ಯ ಎಂಬುದು ವಿವೇಕಾನಂದರ

PRINCIPAL
K.L.E.Society's
... & Commerce College
...BELGERI-582101

ವಾದವಾಗಿದೆ. ಹೀಗಿರುವಾಗ ಅವರನ್ನು ಜಾತಿವಿನಾಶ ಚಳವಳಿಯ ನೇತಾರ, ಜಾತಿವ್ಯವಸ್ಥೆಯ ವಿರುದ್ಧ ಹೋರಾಡಿದ ಬಂಡಾಯದ ದನಿ ಎಂದು ಹೇಳಲು ಸಾಧ್ಯವೆ? ಒಂದೊಮ್ಮೆ ವಿವೇಕಾನಂದರು ಜಾತಿ ವಿನಾಶಕ್ಕೆ ಪ್ರಯತ್ನಿಸಿದ್ದೇ ಆಗಿದ್ದರೆ ಅವರು ಜಾತಿ ಒಳ್ಳೆಯದು, ಜಾತಿಯ ಅಸ್ತಿತ್ವ ಅತ್ಯಗತ್ಯ ಎನ್ನುವಂತಹ ಅಭಿಪ್ರಾಯಗಳನ್ನು ಹೊಂದಿರಲುಹೇಗೆಸಾಧ್ಯ? ವಿವೇಕಾನಂದರ ಕುರಿತ ನಿರೂಪಣೆಗಳ ಹಿನ್ನೆಲೆಯಲ್ಲಿ ವಿವೇಕಾನಂದರ ಚಿಂತನೆಗಳನ್ನು ನೋಡಿದಾಗ, ಜಾತಿ ವಿಷಯದ ಕುರಿತು ವಿವೇಕಾನಂದರು ಅಸಂಬದ್ಧವಾಗಿ ಕಾಣುತ್ತಾರೆ. ಅಂದರೆ ಒಂದು ಕಡೆ ಜಾತಿವಿನಾಶಕ್ಕಾಗಿ ಹೋರಾಟ ಮಾಡುತ್ತಾ, ಮತ್ತೊಂದೆಡೆ ಒಂದು ಉತ್ತಮ ಸಮಾಜಕ್ಕೆ ಜಾತಿ ಅತ್ಯಗತ್ಯ, ಮನುಷ್ಯರೆಲ್ಲರೂ ಜಾತಿಗಳಾಗಿ ವಿಭಾಗವಾಗಬೇಕಿದೆ ಎನ್ನುತ್ತಾರೆ. ಹಾಗಾದರೆ ವಿವೇಕಾನಂದರು ಜಾತಿಯ ಕುರಿತು ಅಸಂಬದ್ಧವಾಗಿ ಮಾತನಾಡಿದ್ದಾರೆಯೇ? ಅಥವಾ ಈ ಅಸಂಬದ್ಧತೆಯು ವಿವೇಕಾನಂದರ ಕುರಿತ ನಿರೂಪಣೆಗಳಿಂದಲೇ ಹುಟ್ಟಿಕೊಂಡಿರುವಂತದ್ದೇ? ಎಂಬುದನ್ನು ಪರೀಕ್ಷಿಸುವ ತುರ್ತು ಎದುರಾಗುತ್ತದೆ. ಈ ಹಿಂದೆ ಗಮನಿಸಿದ ವಿವೇಕಾನಂದರು ಜಾತಿವಿರೋಧಿಯಾಗಿದ್ದರುಎನ್ನುವ ವಿವರಣೆಗಳನ್ನು ಗಮನಿಸಿದಾಗ ವಿವೇಕಾನಂದರ ಚಿಂತನೆಗೂ ಅವರ ಕುರಿತ ನಿರೂಪಣೆಗಳಿಗೂ ಒಂದು ಕಂದರವಿರುವುದಂತೂ ಸ್ಪಷ್ಟವಾಗುತ್ತದೆ. ಆದರೆ ಇದರಿಂದ ವಿವೇಕಾನಂದರ ಕುರಿತು ಇರುವ ಅಸಂಗತತೆಯನ್ನು ವಿವರಿಸಿದಂತಾಗುವುದಿಲ್ಲ. ಹಾಗಾದರೆ, ನಿರೂಪಣೆಗಳಲ್ಲಿರುವಂತಹ ವೈರುಧ್ಯತೆ ಅಥವಾ ಅಸಂಗಗತೆಯನ್ನು ವಿವೇಕಾನಂದರ ವಿಚಾರಗಳಲ್ಲಿಯೂ ಗುರುತಿಸಲು ಸಾಧ್ಯವೆ? ಒಂದೊಮ್ಮೆ ಅಸಂಬದ್ಧತೆ ಕಂಡುಬಂದರೆ ಅದನ್ನು ಹೇಗೆ ಅರ್ಥೈಸಿಕೊಳ್ಳುವುದು ಎಂಬುದನ್ನು ಮುಂದಿನ ಸಂಶೋಧನೆಗಳು ಪರಿಶೀಲಿಸಬೇಕಿದೆ.

## ಟಿಪ್ಪಣಿಗಳು

1. "ಸ್ವಾತಂತ್ರ್ಯಾನಂತರ ದೇಶದಲ್ಲಿ ತೊಡಗಿಸಿಕೊಂಡ ಯಾವುದೇ ಚಳವಳಿಗಳ ಸಾಧನೆ ವಿವೇಕಾನಂದರ ಸಾಧನೆಯ ಮೇರು ಪರ್ವತದ ಒಂದು ಕಣವೂ ಅಲ್ಲ. ಬಹುವ್ಯಾಪಿಯಾದ ಮೊದಲ ಬಂಡಾಯದ ದನಿಯಾದ ವಿವೇಕಾನಂದರನ್ನು ಶೋಷಿತ ಜನ ಕಡೆಗಣಿಸಿ ಮತೀಯ ಸಂಸ್ಥೆಗಳ ತೋಳ್ತೆಕ್ಕೆಗೆ ಬಿಟ್ಟದ್ದು ಇತಿಹಾಸದ ವ್ಯಂಗ್ಯ" (ಜ. ಹೊ. ನಾರಯಣಸ್ವಾಮಿ, 1986, Xiii).
2. ಇದೇ ರೀತಿಯ ವಿವರಣೆಗಳಿಗಾಗಿ ನೋಡಿ:ಸ್ವಾಮಿ ವಿವೇಕಾನಂದ, ಸಂ–3, 1985, 27. ಸ್ವಾಮಿ ವಿವೇಕಾನಂದ, ಸಂ–9, 2013, 511.
3. "ಜಾತಿ ಒಳ್ಳೆಯದು. ನಮ್ಮ ಜೀವನದ ಮಾರ್ಗವನ್ನು ಬಗೆಹರಿಸುವ ಮಾರ್ಗ ಇದೊಂದೇ. ಮನುಷ್ಯರು ಜಾತಿಗಳಾಗಿ ಭಾಗವಾಗಬೇಕಿದೆ. ನೀವು ಇದರಿಂದ ಪಾರಾಗಲಾರಿರಿ. ನೀವು ಎಲ್ಲಿ ಹೋದರೂ ಅಲ್ಲಿ ಜಾತಿ ಇರುವುದು" (ಸ್ವಾಮಿ ವಿವೇಕಾನಂದ, ಸಂ–3, 1985, 133–134).

## ಆಧಾರಗ್ರಂಥಗಳು


- ಸ್ವಾಮಿ ವಿವೇಕಾನಂದರು, 2013, ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ. ಸಂಪುಟ–3, ರಾಮಕೃಷ್ಣಾಶ್ರಮ: ಮೈಸೂರು.
- ಸ್ವಾಮಿ ವಿವೇಕಾನಂದರು, 2013, ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ. ಸಂಪುಟ–4, ರಾಮಕೃಷ್ಣಾಶ್ರಮ: ಮೈಸೂರು.
- ಸ್ವಾಮಿವಿವೇಕಾನಂದರು, 2013, ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ. ಸಂಪುಟ–5, ರಾಮಕೃಷ್ಣಾಶ್ರಮ: ಮೈಸೂರು.
- ಸ್ವಾಮಿ ವಿವೇಕಾನಂದರು, 2013, ಸ್ವಾಮಿ ವಿವೇಕನಂದರ ಕೃತಿಶ್ರೇಣಿ. ಸಂಪುಟ–7. ರಾಮಕೃಷ್ಣಾಶ್ರಮ: ಮೈಸೂರು.
- ಸ್ವಾಮಿವಿವೇಕಾನಂದರು, 2013, ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ. ಸಂಪುಟ–9, ರಾಮಕೃಷ್ಣಾಶ್ರಮ: ಮೈಸೂರು.
- ಸ್ವಾಮಿ ವಿವೇಕಾನಂದರು, 1985, ಕೊಲೊಂಬೊ ಇಂದ ಆಲ್ಮೋರಕೆ, ರಾಮಕೃಷ್ಣಾಶ್ರಮ: ಮೈಸೂರು.
- ಸ್ವಾಮಿ ವಿವೇಕಾನಂದರು, 1998, *ವರ್ಣದ ಸಮಸ್ಯೆ;* ರಾಷ್ಟ್ರ ನಿರ್ಮಾಣ, ರಾಮಕೃಷ್ಣಾಶ್ರಮ: ಮೈಸೂರು.
- ಶ್ರಿಮತಿ ಕೆ.ಪಿ. ಇಂದುಕಲಾ, 2001, ನೆನಪುಗಳಲ್ಲಿ ವಿವೇಕಾನಂದರು. ಉದಯರವಿ ಪ್ರಕಾಶನ; ಮೈಸೂರು.
- ಜ. ಹೋ. ನಾರಾಯಣ ಸ್ವಾಮಿ, 1986, ವಿವೇಕಾನಂದರ ಕ್ರಾಂತಿಕಾರಿ ವಿಚಾರಗಳು. ಮಾನವ ಪ್ರಕಾಶನ ; ಹಾಸನ.
- ಸ್ವಾಮಿವಿವೇಕಾನಂದ, 1970, ಏಕನಾಥ ರಾನಡೆ (ಸಂ), ಏಳಿ! ಎದ್ದೇಳಿ!!, ರಾಷ್ಟ್ರೋತ್ಥಾನ ಸಾಹಿತ್ಯ: ಬೆಂಗಳೂರು.
- ಬರಗೂರು ರಾಮಚಂದ್ರಪ್ಪ, ವಾರ್ತಾಭಾರತಿ, ಜನವರಿ 19 2016. http://www.varthabharati.in/article/karnataka/2810
- ಜಿ. ಎಸ್ ಶಿವರುದ್ರಪ್ಪ,2011,"ಕನ್ನಡದಲ್ಲಿ ಪರಮಹಂಸ ವಿವೇಕಾನಂದ ವಾಣಿ: ಕುವೆಂಪು", *http://goo.gl/aXOAv7*
- 'Raise the masses slowly up, raise them to equality', THE HINDU, January 12, 2013. (http://www.thehindu.com/news/national/raise-the-masses-slowly-up-raise)


***************

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E.Society's
Arts & Commerce College
GADAG-BETAGERI 582101